# ವಿದ್ಯುಚ್ಛಕ್ತಿ ಲೋಕಪಾಲರು

## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಇವರ ಮುಂದೆ.

**ನಂ:16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು.**

**ಪ್ರಕರಣ ಸಂಖ್ಯೆ:ಒಎಂಬಿ/ಬಿ/ಜಿ–316/2019**
**ದಿನಾಂಕ: 17–06–2019**

**ಮೇಲ್ಮನವಿದಾರ,**
ಶ್ರೀ ಪಂಡಿತಾರಾಧ್ಯ ಕೆ.ಎಸ್,
ಹೊಸಕೆರೆ (ಅಂಚೆ),
ಗುಬ್ಬಿ ತಾಲ್ಲೂಕು,
ತುಮಕೂರು ಜಿಲ್ಲೆ.

**ಪ್ರತಿವಾದಿಗಳು:**

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
   ಕಾರ್ಯ ಮತ್ತು ಪಾಲನಾ ಉಪವಿಭಾಗ,
   ನಿಟ್ಟೂರು,
   ಗುಬ್ಬಿ ತಾಲ್ಲೂಕು,
   ತುಮಕೂರು ಜಿಲ್ಲೆ.
2. ಅಧ್ಯಕ್ಷರು, ಸಿಜಿಆರ್‌ಎಫ್, ಅಧೀಕ್ಷಕ ಇಂಜಿನಿಯರ್(ವಿ.)
   ಕಾ & ಪಾ ತುಮಕೂರು ವೃತ್ತ, ಬೆಸ್ಕಾಂ,
   ಕೋತಿತೋಪು ರಸ್ತೆ,
   ತುಮಕೂರು–572102.

ಪ್ರಸ್ತುತ ಪ್ರಕರಣದಲ್ಲಿ ಮೇಲ್ಮನವಿದಾರರಾದ ಶ್ರೀ ಪಂಡಿತಾರಾಧ್ಯ ಕೆ.ಎಸ್,ಇವರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಸಿಜಿಆರ್‌ಎಫ್, ತುಮಕೂರು ಜಿಲ್ಲೆ, ತುಮಕೂರು ಇವರ ದೂರು ಸಂಖ್ಯೆ: ಬೆ/ಗ್ರಾವೇ/ಪ್ರ.ಸ.4/2018–19/3948–51 ಪ್ರಕರಣದಲ್ಲಿ ದಿನಾಂಕ: 22–12–2018 ರಂದು ಮಾಡಿರುವ ಆದೇಶವನ್ನು ಪ್ರಶ್ನಿಸಿ ಈ ಪ್ರಾಧಿಕಾರದ ಮುಂದೆ ದಿನಾಂಕ: 21–01–2019 ರಂದು ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ:28–01–2019 ರಂದು ಮೇಲ್ಮನವಿದಾರರು ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಬೆಸ್ಕಾಂ, ನಿಟ್ಟೂರು ಉಪ ವಿಭಾಗ, ಗುಬ್ಬಿ ತಾಲ್ಲೂಕು, ತುಮಕೂರು ಪ್ರತಿವಾದಿ–1 ಇವರಿಗೆ ನೋಟೀಸ್ ನೀಡಿ KERC (CGRF & Ombudsman) Regulations 2004, ರ Regulation 20 (1) ರ ಪ್ರಕಾರ ಉಭಯ ಪಕ್ಷದವರು ಸಂಧಾನದ ಮೂಲಕ ರಾಜಿ ಮಾಡಿಕೊಳ್ಳಲು ಇರುವ ಅವಕಾಶ, ಹಾಗೂ ಅದರ ಪ್ರಯೋಜನ ಪಡೆಯಲು ತಿಳಿಸುತ್ತಾ, ದಿನಾಂಕ:07–02–2019 ರಂದು ಬೆಳಿಗ್ಗೆ 11.30 ಘಂಟೆಗೆ ವಿದ್ಯುಚ್ಛಕ್ತಿ ಲೋಕಪಾಲರ ಕಛೇರಿಗೆ ವಿಚಾರಣೆಗೆ ಹಾಜರಾಗಲು ತಿಳಿಸಲಾಯಿತು.

ದಿನಾಂಕ:07–02–2019 ಹಾಗೂ 20–02–2019 ರಂದು ಪ್ರಕರಣದ ಕುರಿತು ವಿಚಾರಣೆ ನಡೆಸಲಾಯಿತು. ಮೇಲ್ಮನವಿ ಕುರಿತು ಪ್ರತಿವಾದಿ–1 ಇವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಗೆ ಮೇಲ್ಮನವಿದಾರರು ಸಹ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

<u>ಪ್ರಕರಣದ ವಿವರಗಳು ಈ ಕೆಳಕಂಡಂತೆ ಇರುತ್ತವೆ.</u>

ಮೇಲ್ಮನವಿದಾರರು ಮೇಲ್ಮನವಿ ದೂರಿನಲ್ಲಿ ಬೆಸ್ಕಾಂ ನಿಯಮಿತಕ್ಕೆ ಸೇರಿದ ವಿದ್ಯುತ್ ಸ್ಥಾವರ ಸಂಖ್ಯೆ: ಹೆಚ್‌ಕೆಪಿ 40ಗೆ, 15 ಹೆಚ್.ಪಿ ವಿದ್ಯುತ್ ಸಂಪರ್ಕವನ್ನು ತಮ್ಮ ಹಿಟ್ಟಿನ ಗಿರಣಿಗೆ ಪಡೆದುಕೊಂಡಿದ್ದು, ದಿನಾಂಕ: 12–06–2018 ರಿಂದ ಜುಲೈ 2018 ಕೊನೆಯ ವಾರದವರೆಗೆ ಸುಮಾರು 50 ದಿನಗಳ ಕಾಲ ತಮ್ಮ ಸ್ಥಾವರಕ್ಕೆ ವಿನಾಕಾರಣ ವಿದ್ಯುತ್ ಸಂಪರ್ಕವನ್ನು ಸಕಾರಣವಿಲ್ಲದೆ ಮತ್ತು ತಿಳಿಸದೆ ಕಡಿತಗೊಳಿಸಿದ್ದಾರೆಂದು ತಿಳಿಸಿರುತ್ತಾರೆ ಹಾಗೂ ಮುಂದುವರೆಯುತ್ತಾ ದಿನಾಂಕ 19–12–2018ರಂದು ದೂರವಾಣಿ ಮೂಲಕ ಎನ್.ಜೆ.ವೈ ಫೀಡರ್‌ನಿಂದ ವಿದ್ಯುತ್ ಸರಬರಾಜು ಅಗುತ್ತಿಲ್ಲ ಎಂದು ಸಹ ದೂರು ದಾಖಲಿಸಿರುತ್ತಾರೆ. ಮೇಲ್ಮನವಿದಾರರು ವಿದ್ಯುತ್ ಸರಬರಾಜು ಆಗದ ಅವಧಿ ದಿನಾಂಕ 12–06–2018 ರಿಂದ 24–07–2018 ರವೆಗಿನ ನಷ್ಟವನ್ನು ಭರಿಸಿಕೊಡಬೇಕೆಂದು ಹಾಗೂ ಸಿಜಿಆರ್‌ಎಫ್ ರವರ ಆದೇಶ ದಿನಾಂಕ: 22–12–2018 ಅನ್ನು ರದ್ದುಗೊಳಿಸಿ ಆದೇಶಿಸಲು ಕೋರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿ-2 ರವರು ತಮ್ಮ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ತುಮಕೂರು ಜಿಲ್ಲಾ ಆದೇಶ ದಿನಾಂಕ 22-12-2018ರಂದು ಈ ಕೆಳಕಂಡಂತೆ ಆದೇಶಿಸಿರುತ್ತಾರೆ:

"ದೂರುದಾರರ ಹಿಟ್ಟಿನ ಗಿರಣಿ ಟಿ.ಸಿ. ಮತ್ತು ಹಿರೆಹಳ್ಳಿಕೆರೆ ಹತ್ತಿರವಿರುವ ಉನುಗನಾಲ ಗ್ರಾಮದ ಕುಡಿಯುವ ನೀರು ಸ್ಥಾವರದ ಟಿ.ಸಿ.ಗಳೆರಡಕ್ಕೂ ಫೀಡರ್ ತೊಂದರೆಯಾದ ದಿವಸವೇ ಅಂದರೆ ದಿನಾಂಕ 12-06-2018 ರಂದೇ ಎಫ್-2 ಹಾಗಲವಾಡಿ ಐ.ಪಿ ಫೀಡರ್‌ನಿಂದ ಪರ್ಯಾಯ ವಿದ್ಯುತ್ ವ್ಯವಸ್ಥೆ ಮಾಡಲಾಗಿದ್ದರೂ ಸಹಾ ಶ್ರೀಯುತ ಪಂಡಿತಾರಾಧ್ಯರವರ ವಾಸ ಸ್ಥಳದಿಂದ 2 ಕಿ.ಮೀ.ದೂರವಿರುವ ಅವರ ಹಿಟ್ಟಿನ ಗಿರಣಿಗೆ ವೈಯಕ್ತಿಕ ಕಾರಣದಿಂದಾಗಿ ದೈನಂದಿನ ಕೆಲಸಕ್ಕೆ (ಹಿಟ್ಟಿನ ಗಿರಣಿಗೆ) ಹೋಗದೇ ಇದ್ದು, ವಿದ್ಯುತ್ ಇರುವಿಕೆ ಬಗ್ಗೆ ಪರಿಶೀಲಿಸಿರುವುದಿಲ್ಲ ಎಂದು ಒಪ್ಪಿಕೊಂಡಿದ್ದು. ಪರ್ಯಾಯ ವಿದ್ಯುತ್ ವ್ಯವಸ್ಥೆ ಮಾಡಲಾಗಿದ್ದರೂ ಸಹಾ ವಿದ್ಯುತ್ ಸರಬರಾಜಿರುವ ವೇಳೆ ಗ್ರಾಹಕರು ಪರಿಶೀಲಿಸದೇ ಇರುವುದು ಮತ್ತು ಉಪಯೋಗಿಸಿಕೊಳ್ಳದೆ ಇರುವುದರಿಂದ ಗ್ರಾಹಕರಿಂದಲೇ ತಪ್ಪಾಗಿರುವುದು ದೃಢಪಟ್ಟಿರುತ್ತದೆ. ಮುಂದುವರೆದು ವಿದ್ಯುತ್ ಸರಬರಾಜಾಗದ ಅವಧಿಯಲ್ಲಿನ ನಷ್ಟವನ್ನು ಭರಿಸಿಕೊಡುವ ವಿಚಾರವು ವಿದ್ಯುತ್ ಸರಬರಾಜಿನ ಒಡಂಬಡಿಕೆಯಲ್ಲಿ ಒಳಗೊಂಡಿರದ ಕಾರಣದಿಂದಾಗಿ ಹಾಗೂ ಗ್ರಾಹಕರಿಂದಲೇ ತಪ್ಪಾಗಿರುವುದು ದೃಢಪಟ್ಟಿರುತ್ತದೆ. ಈ ಕಾರಣದಿಂದಾಗಿ ಆ ಅವಧಿಯಲ್ಲಿನ ನಷ್ಟವನ್ನು ಭರಿಸಲು ಕಂಪನಿಯ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯರ್ಥಗೊಳಿಸಲಾಗಿದೆ".

ಮೇಲ್ಮನವಿ ಕುರಿತು ಪ್ರತಿವಾದಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ನಿಟ್ಟೂರು ಕಾ & ಪಾ ಉಪ-ವಿಭಾಗ, ನಿಟ್ಟೂರು ಇವರು ದಿನಾಂಕ 07-02-2019 ರಂದು ಈ ಕೆಳಕಂಡಂತೆ ಖಂಡಿಕೆವಾರು ಲಿಖಿತ ಹೇಳಿಕೆ ನೀಡಿರುತ್ತಾರೆ.

1) ಮೇಲ್ಮನವಿದಾರರು ದಿನಾಂಕ 12-06-2018 ರಂದು ಹೊಸಕೆರೆ ಎಂ.ಯು.ಎಸ್.ಎಸ್.ನಿಂದ ವಿತರಿಸಲ್ಪಡುವ 11 ಕೆವಿ ಎಫ್-12 ಬೋಗಸಂದ್ರ ಎನ್.ಜೆ.ವೈ ಫೀಡರ್ ಲೈನ್ ಟ್ರಬಲ್ ಇದೆ ಎಂದು ತಿಳಿಸಿದ್ದರ ಮೇರೆಗೆ ಶ್ರೀ ಸುನೀಲ್, ಎ.ಎಲ್.ಎಂ. ಲೈನ್‌ಮನ್, ಇವರು ಲೈನ್ ಟ್ರಬಲ್ ಅಟೆಂಡ್ ಮಾಡಲು ಹೋದಾಗ ಅಲ್ಲಿಯ ಸಾರ್ವಜನಿಕರು ಎ.ಬಿ.ಕೇಬಲ್ ಕಡೆ ಸೌಂಡ್ ಬರುತ್ತದೆ ಎಂದು ತಿಳಿಸಿರುತ್ತಾರೆ. ಆಗ ಶಾಖಾಧಿಕಾರಿಗಳು ಮತ್ತು ಲೈನ್‌ಮನ್ ಇಬ್ಬರು ಸ್ಥಳಕ್ಕೆ ಹೋಗಿ 11 ಕೆವಿ ಎಫ್-12 ಬೋಗಸಂದ್ರ ಎನ್.ಜೆ.ವೈ ಫೀಡರ್‌ನ ಎ.ಬಿ.ಕೇಬಲ್ ನಂ.1 ಫೇಜ್ ಬರ್ಸ್ಟ್

ಆಗಿರುವುದು ಕಂಡು ಬಂದಿದ್ದರ ಮೇರೆಗೆ ಆ ಲೈನ್‌ನಲ್ಲಿ ಇದ್ದ 2 ಪರಿವರ್ತಕಗಳಿಗೆ ಪರ್ಯಾಯ ವಿದ್ಯುತ್ ಸರಬರಾಜಿಗಾಗಿ ಆ ದಿನವೇ ಎಫ್–2 ಹಾಗಲವಾಡಿ ಐ.ಪಿ ಫಿಡರ್‌ನಿಂದ ಜಂಪ್ ಹಾಕಿಸಿ ದೂರುದಾರರಾದ ಶ್ರೀ ಪಂಡಿತಾರಾಧ್ಯರವರ ಹಿಟ್ಟಿನಗಿರಣಿ ಟಿ.ಸಿ. ಮತ್ತು ಹಿರೆಹಳ್ಳಿಕೆರೆ ಹತ್ತಿರವಿರುವ ಉನುಗನಾಲ ಗ್ರಾಮದ ಕುಡಿಯುವ ನೀರು ಸ್ಥಾವರದ ಟಿ.ಸಿ.ಗಳೆರಡಕ್ಕೂ ಆ ದಿವಸವೇ ಪರ್ಯಾಯ ವಿದ್ಯುತ್ ವ್ಯವಸ್ಥೆಮಾಡಲಾಗಿದೆ.

2) ತೃಪ್ತಿಕರವಾದ ವರದಿಯನ್ನು ಗ್ರಾಹಕರಿಗೆ ನೀಡಬೇಕಾದ್ದರಿಂದ ಮಾಪಕ ಪರೀಕ್ಷಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರಲ್ಲಿ ಮನವಿ ಮಾಡಿಕೊಂಡು ಹೆಚ್.ಕೆ.ಪಿ–40 ಪವರ್ ಸ್ಥಾವರದ ಮಾಪಕದ ಸಂಪೂರ್ಣ ಡಾಟಾ ಡೌನ್ ಲೋಡ್ ಮಾಡಿಕೊಡಲು ಕೋರಿರುತ್ತೇನೆ. ನಮ್ಮ ಕೋರಿಕೆ ಮೇರೆಗೆ ಹೆಚ್.ಕೆ.ಪಿ–40 ಸ್ಥಾವರಕ್ಕೆ ಮಾಪಕ ಪರೀಕ್ಷಾ ವಿಭಾಗದವರು 3 ಬಾರಿ ಭೇಟಿ ನೀಡಿ ಮಾಪಕ ಪರೀಕ್ಷಿಸಿದರೂ ತಾಂತ್ರಿಕ ಕಾರಣಗಳಿಂದ ಡಾಟಾ ಡೌನ್ ಲೋಡ್ ಆಗಿರುವುದಿಲ್ಲ. ಈ ಸಮಯದಲ್ಲಿ ಗ್ರಾಹಕರು ನೇರವಾಗಿ ಜಿಲ್ಲಾ ಸಿ.ಜಿ.ಆರ್.ಎಫ್.ಗೆ ಅರ್ಜಿ ಸಲ್ಲಿಸಿರುತ್ತಾರೆ.

3) ದೂರುದಾರರ ಹಿಟ್ಟಿನ ಗಿರಣಿ ಗೆ ಎಫ್–12 ಬೋಗಸಂದ್ರ ಎನ್.ಜೆ.ವೈ ಫೀಡರ್‌ನಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು ಕಾರಣಾಂತರದಿಂದ ಎಫ್–12 ಬೋಗಸಂದ್ರ ಎನ್.ಜೆ.ವೈ ಫೀಡರ್‌ಗೆ ಅಳವಡಿಸಿದ್ದ ಎ.ಬಿ. ಕೇಬಲ್ ಬರ್ಸ್ಟ್ ಆಗಿರುತ್ತದೆ. ಆದಿವಸವೇ ಎಫ್–2 ಹಾಗಲವಾಡಿ ಐ.ಪಿ ಸೆಟ್ ಫೀಡರ್ ನಿಂದ ಜಂಪ್ ಹಾಕಿ ಪರ್ಯಾಯ ವಿದ್ಯುತ್ ಸರಬರಾಜು ವ್ಯವಸ್ಥೆ ಕಲ್ಪಿಸಲಾಗಿದೆ. ಇದರ ಜೊತೆಗೆ ಉನಗನಾಲ ಕುಡಿಯುವ ನೀರು ಸರಬರಾಜು ಕೇಂದ್ರದ ಟಿ.ಸಿಗೂ ಸಹ ವಿದ್ಯತ್ ಸರಬರಾಜು ನೀಡಲಾಗಿದೆ. ಶ್ರೀಯುತ ಪಂಡಿತಾರಾಧ್ಯ ರವರ ವಾಸ ಸ್ಥಳದಿಂದ ಸುಮಾರು 2 ಕಿ.ಮೀ. ದೂರವಿರುವ ಅವರ ಹಿಟ್ಟಿನ ಗಿರಣಿಗೆ ವೈಯಕ್ತಿಕ ಕಾರಣದಿಂದಾಗಿ ದೈನಂದಿನ ಕೆಲಸಕ್ಕೆ (ಹಿಟ್ಟಿನ ಗಿರಣಿಗೆ) ಹೋಗದೇ ಇದ್ದು ವಿದ್ಯುತ್ ಇರುವಿಕೆ ಬಗ್ಗೆ ಪರಿಶೀಲಿಸಿರುವುದಿಲ್ಲ ಎಂದು ವಿಚಾರಣೆ ಸಮಯದಲ್ಲಿ ಒಪ್ಪಿಕೊಂಡಿರುತ್ತಾರೆ ಮತ್ತು ಫೀಡರ್ ತೊಂದರೆಯಾದ ದಿನದಂದೇ ಎಫ್–2 ಹಾಗಲವಾಡಿ ಐ.ಪಿ.ಫೀಡರ್ ನಿಂದ ಪರ್ಯಾಯ ವಿದ್ಯುತ್ ವ್ಯವಸ್ಥೆ ಮಾಡಲಾಗಿದ್ದರೂ ಸಹ ವಿದ್ಯುತ್ ಸರಬರಾಜಿರುವ ವೇಳೆ ಗ್ರಾಹಕರು ಪರಿಶೀಲಿಸದೇ ಇರುವುದು ಮತ್ತು ಉಪಯೋಗಿಸಿಕೊಳ್ಳದೇ ಇರುವುದು ಗ್ರಾಹಕರಿಂದಲೇ ತಪ್ಪಾಗಿರುವುದು ದೃಢಪಟ್ಟಿರುವುದರಿಂದ ದೂರುದಾರರಿಗೆ ವಿದ್ಯುತ್ ಸರಬರಾಜಾಗದ ಅವಧಿಯಲ್ಲಿನ ನಷ್ಟವನ್ನು ಭರಿಸಲು ಕಂಪನಿಯ

ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಅಧ್ಯಕ್ಷರು ಗ್ರಾ..ಕುಂ.ಕೊ.ನಿವಾರಣಾ ವೇದಿಕೆ ಅವರು ಇತ್ಯರ್ಥಗೊಳಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

4) ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿ ಅರ್ಜಿ ಅದರೊಂದಿಗೆ ಸಲ್ಲಿಸಲಾದ ದಾಖಲಾತಿಗಳು, ಪ್ರತಿವಾದಿ-1 ಇವರು ಸಲ್ಲಸಿರುವ ಪಂಕ್ತಿವಾರು ಉತ್ತರಗಳು ಹಾಗೂ ಅದರದೊಂದಿಗೆ ಸಲ್ಲಿಸಲಾದ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿದೆ. ಮೇಲ್ಮನವಿದಾರರು ತಮಗೆ ಸೇರಿದ ಹಿಟ್ಟಿನ ಗಿರಣಿಗೆ ವಿದ್ಯುತ್ ಸ್ಥಾವರ ಸಂಖ್ಯೆ ಹೆಚ್‌ಕೆಪಿ 40ಕ್ಕೆ, 15 ಹೆಚ್.ಪಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿದ್ದು. ದಿನಾಂಕ 12-06-2018 ರಂದು ಅವರ ಹಿಟ್ಟಿನ ಗಿರಣಿಗೆ ವಿದ್ಯುತ್ ಪೂರೈಸುತ್ತಿರುವ 11 ಕೆವಿ ಎಫ್-12 ಬೋಗಸಂದ್ರ ಎನ್.ಜೆ.ವೈ ಫೀಡರ್ ಲೈನ್‌ನ ಎ.ಬಿ.ಕೇಬಲ್ ನಂ.1 ಫೇಸ್ ಬರ್ಸ್ಟ್ ಆದ ಕಾರಣ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿರುತ್ತದೆ. ಇದೇ ಫೀಡರ್ ಲೈನ್ ಮೂಲಕ ಉನುಗನಾಲ ಗ್ರಾಮದ ಕುಡಿಯುವ ನೀರಿನ ಸ್ಥಾವರಕ್ಕೆ ವಿದ್ಯುತ್ ಪೂರೈಕೆ ಆಗುತ್ತಿರುವ ಕಾರಣ ಗ್ರಾಮಸ್ಥರಿಗೆ ಕುಡಿಯುವ ನೀರಿನ ತೊಂದರೆ ಯಾಗಬಾರದೆಂದು ಅದೇ ದಿನ ಪರ್ಯಾಯ ವಿದ್ಯುತ್ ಸರಬರಾಜುಗಾಗಿ ಎಫ್-2 ಹಾಗಲವಾಡಿ ಐ.ಪಿ ಫೀಡರ್‌ನಿಂದ ಜಂಪ್ ಹಾಕಿಸಿ, ಮೇಲ್ಮನವಿದಾರರ ಹಿಟ್ಟಿನ ಗಿರಣಿಯ ಟಿ.ಸಿ. ಹಾಗೂ ಉನುಗನಾಲ ಗ್ರಾಮದ ಕುಡಿಯುವ ನೀರಿನ ಸ್ಥಾವರದ ಟಿ.ಸಿ. ಎರಡಕ್ಕೂ ವಿದ್ಯುತ್ ಪೂರೈಕೆ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರತಿವಾದಿ-1, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ನಿಟ್ಟೂರು ಇವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿರುತ್ತಾರೆ. ಅದಕ್ಕೆ ಪುರಾವೆಯಾಗಿ ಈ ಕೆಳಕಂಡಂತೆ ದಾಖಲೆಗಳನ್ನು ಸಲ್ಲಿಸಿರುತ್ತಾರೆ:

1) ಹೆಚ್.ಕೆ.ಪಿ 40ರ ಸ್ಥಾವರ ಮಾಪಕದ ಡಾಟಾ ವಿವರ (ಎಂ.ಟಿ.ವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ತುಮಕೂರು)
2) ಸದರಿ ಸ್ಥಾವರಕ್ಕೆ ಇರುವ NJY ಫೀಡರ್‌ನ ಎ.ಬಿ.ಕೇಬಲ್ಲನ್ನು ಸರಿಪಡಿಸಿದ್ದರ ಬಗ್ಗೆ ವಿವರ (ಅಂದರೆ ಸ್ಟೇಷನ್ ಲಾಗ್ ಶೀಟ್‌ನಲ್ಲಿ ಇರುವಂತೆ ಲೈನ್ ಕ್ಲಿಯರ್ ತೆಗೆದುಕೊಂಡ ಬಗ್ಗೆ ವಿವರ).
3) ಶ್ರೀ ಎಂ.ಎನ್.ಸೋಮಶೇಖರ್, ಶಾಖಾಧಿಕಾರಿ, ಬೆಸ್ಕಾಂ, ಹೊಸಕೆರೆ ಶಾಖೆ ಇವರ ಹೇಳಿಕೆ.
4) ಶ್ರೀ ಸುನಿಲ ವಿಠಲ್ ಕುಂಬಾರ, ಸಹಾಯಕ ಮಾರ್ಗದಾಳು, ಬೆಸ್ಕಾಂ, ಹೊಸಕೆರ ಶಾಖೆ, ಇವರ ಹೇಳಿಕೆ
5) ಶ್ರೀ ಮಹದೇವಯ್ಯ, ಸದಸ್ಯರು, ಶಿವಘರ ಗ್ರಾಮ ಪಂಚಾಯತ್, ಉನಗವಾಲ ಗ್ರಾಮ ಇವರ ಹೇಳಿಕೆ.

ವಿದ್ಯುತ್ ಪೂರೈಕೆ ಸ್ಥಗಿತಗೊಂಡ ದಿನವೇ ಪರ್ಯಾಯ ವ್ಯವಸ್ಥೆ ಮೂಲಕ ಮೇಲ್ಮನವಿದಾರರ ಹಿಟ್ಟಿನ ಗಿರಣಿಗೆ ವಿದ್ಯುತ್ ಸರಬರಾಜು ಮಾಡಿರುವ ಕಾರಣ ಮೇಲ್ಮನವಿದಾರರ ಕೋರಿಕೆಯಂತೆ ಅವರಿಗೆ ಯಾವುದೇ ನಷ್ಟಭರಿಸುವ ಸಂದರ್ಭಬರುವುದಿಲ್ಲ ಹಾಗೂ ಕೇಬಲ್ ಜಾಯಿಂಟ್ ಕಿಟ್‌ಗಳು ತಮ್ಮ ಉಗ್ರಾಣದಲ್ಲಿ ಲಭ್ಯವಿಲ್ಲದ ಕಾರಣ ನಿಟ್ಟೂರು ಶಾಖೆಯಲ್ಲಿ ವಿಚಾರಿಸಿ ಎರವಲಾಗಿ ಪಡೆದು ಖಾಸಗಿ ಕೇಬಲ್ ಜಾಯಿಂಟರ್‌ಗಳನ್ನು ಕರೆಸಿ ಕೇಬಲ್ ಜಾಯಿಂಟ್ ಮಾಡಿಸಿ ಮೇಲ್ಮನವಿದಾರರ ಹಿಟ್ಟಿನ ಗಿರಣಿ ಹಾಗೂ ಉನುಗನಾಲ ಗ್ರಾಮದ ಕುಡಿಯುವ ನೀರಿನ ಸ್ಥಾವರದ ಪರಿವರ್ತಕಗಳಿಗೆ ಸರಿಪಡಿಸಲು ನಿರಂತರ ಜ್ಯೋತಿ ವಿದ್ಯುತ್ ಸರಬರಾಜುನಲ್ಲಿ ಕಲ್ಪಿಸಲು ಸುಮಾರು 15 ರಿಂದ 20 ದಿವಸಗಳು ಬೇಕಾಗಿರುತ್ತದೆ. ಆದರೆ, ಮೇಲ್ಮನವಿದಾರರಿಗೆ ಪರ್ಯಾಯ ವ್ಯವಸ್ಥೆ ಮೂಲಕ 11 ಕೆ.ವಿ ಎಫ್–2 ಹಾಗಲವಾಡಿ ಐಪಿ ಫೀಡರ್‌ನಿಂದ ವಿದ್ಯುತ್ ಸರಬರಾಜು ಮಾಡಿರುವುದರಿಂದ ಅವರಿಗೆ ಸಂಪೂರ್ಣವಾಗಿ ವಿದ್ಯುತ್ ಸಂಪರ್ಕ ಕಡಿತ ಗೊಂಡಿರುವುದಿಲ್ಲವೆಂದು ಹೇಳಿರುತ್ತಾರೆ.

ಮೇಲ್ಮನವಿದಾರರು ಸಿಜಿಆರ್‌ಎಫ್, ತುಮಕೂರು ಇವರ ಮುಂದೆ ಸಲ್ಲಿಸಿದ ದೂರಿನ ಕುರಿತು ದಿನಾಂಕ 22–12–2018ರಂದು ಹೊರಡಿಸಿರುವ ಆದೇಶದಲ್ಲಿ ಈ ಕೆಳಕಂಡಂತೆ ದಾಖಲಿಸಲಾಗಿದೆ.

1) ದೂರುದಾರರ ಹಿಟ್ಟಿನ ಗಿರಣಿ ಟಿ.ಸಿ. ಮತ್ತು ಹಿರೆಹಳ್ಳಿಕೆರೆ ಹತ್ತಿರವಿರುವ ಉನುಗನಾಲ ಗ್ರಾಮದ ಕುಡಿಯುವ ನೀರು ಸ್ಥಾವರದ ಟಿ.ಸಿ.ಗಳೆರಡಕ್ಕೂ ಫೀಡರ್ ತೊಂದರೆಯಾದ ದಿವಸವೇ ಎಫ್–2 ಹಾಗಲವಾಡಿ ಐ.ಪಿ ಫೀಡರ್‌ನಿಂದ ಪರ್ಯಾಯ ವಿದ್ಯುತ್ ವ್ಯವಸ್ಥೆ ಮಾಡಲಾಗಿದ್ದರೂ ಸಹಾ ಶ್ರೀಯುತ ಪಂಡಿತಾರಾಧ್ಯರವರ ವಾಸ ಸ್ಥಳದಿಂದ 2 ಕಿ.ಮೀ.ದೂರವಿರುವ ಅವರ ಹಿಟ್ಟಿನ ಗಿರಣಿಗೆ ವೈಯಕ್ತಿಕ ಕಾರಣದಿಂದಾಗಿ ದೈನಂದಿನ ಕೆಲಸಕ್ಕೆ (ಹಿಟ್ಟಿನ ಗಿರಣಿಗೆ) ಹೋಗದೇ ಇದ್ದು, ವಿದ್ಯುತ್ ಇರುವಿಕೆ ಬಗ್ಗೆ ಪರಿಶೀಲಿಸಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.
2) ಫೀಡರ್ ತೊಂದರೆಯಾದ ದಿನದಂದೇ ಎಫ್–2 ಹಾಗಲವಾಡಿ ಐ.ಪಿ ಫೀಡರ್‌ನಿಂದ ಪರ್ಯಾಯ ವಿದ್ಯುತ್ ವ್ಯವಸ್ಥೆ ಮಾಡಿಲಾಗಿದ್ದರೂ ಸಹಾ ವಿದ್ಯುತ್ ಸರಬರಾಜಿರುವ ವೇಳೆ ಗ್ರಾಹಕರು ಪರಿಶೀಲಿಸದೇ ಇರುವುದು ಮತ್ತು ಉಪಯೋಗಿಸಿಕೊಳ್ಳದೆ ಇರುವುದರಿಂದ ಗ್ರಾಹಕರಿಂದಲೇ ತಪ್ಪಾಗಿರುವುದು ದೃಢಪಟ್ಟಿರುತ್ತದೆ.

3) ವಿದ್ಯುತ್ ಸರಬರಾಜಾಗದ ಅವಧಿಯಲ್ಲಿನ ನಷ್ಟವನ್ನು ಭರಿಸಿಕೊಡುವ ವಿಚಾರವು ವಿದ್ಯುತ್ ಸರಬರಾಜಿನ ಒಡಂಬಡಿಕೆಯಲ್ಲಿ ಒಳಗೊಂಡಿರುವ ಕಾರಣದಿಂದಾಗಿ ಹಾಗೂ ಗ್ರಾಹಕರಿಂದಲೇ ತಪ್ಪಾಗಿರುವುದು ದೃಢಪಟ್ಟಿರುವುದರಿಂದ, ದೂರುದಾರರ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಲು ತೀರ್ಮಾನಿಸಲಾಯಿತು.

ಸಿಜಿಆರ್‌ಎಫ್‌ನ ಆದೇಶದ ಈ ಅವಲೋಕನೆಗಳನ್ನು ಮೇಲ್ಮನವಿದಾರರು ಅಲ್ಲಗಳೆದಿರುವುದಿಲ್ಲ.

ಮೇಲ್ಕಾಣಿಸಿದ ಕಂಡಿಕೆಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಸಂಖ್ಯೆ:ಒಎಂಬಿ/ಬಿ/ಜಿ-316/2019/ಡಿ-1299** **ದಿನಾಂಕ: 17-06-2019**

## ಆದೇಶ

ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ ಹಾಗೂ ಸಿಜಿಆರ್‌ಎಫ್, ತುಮಕೂರು ಇವರು ಹೊರಡಿಸಿರುವ ಆದೇಶ ಸಂಖ್ಯೆ ಬೆ/ಗ್ರಾವೇ/ಪ್ರ.ಸ.4/2018-19/3948-51 ದಿನಾಂಕ: 22-12-2018ನ್ನು ಎತ್ತಿ ಹಿಡಿಯಲಾಗಿದೆ.

ಸಹಿ/-
(ಎಸ್.ಎಸ್.ಪಟ್ಟಣಶೆಟ್ಟಿ)
ವಿದ್ಯುಚ್ಛಕ್ತಿ ಲೋಕಪಾಲರು

1) ಶ್ರೀ ಪಂಡಿತಾರಾಧ್ಯ ಕೆ.ಎಸ್,
ಹೊಸಕೆರೆ (ಅಂಚೆ),
ಗುಬ್ಬಿ ತಾಲ್ಲೂಕು,
ತುಮಕೂರು ಜಿಲ್ಲೆ.

2) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ,
ನಿಟ್ಟೂರು,
ಗುಬ್ಬಿ ತಾಲ್ಲೂಕು,
ತುಮಕೂರು ಜಿಲ್ಲೆ.

3) ಅಧ್ಯಕ್ಷರು, ಸಿಜಿಆರ್ಎಫ್, ಅಧೀಕ್ಷಕ ಇಂಜಿನಿಯರ್(ವಿ.)
   ಕಾ & ಪಾ ತುಮಕೂರು ವೃತ್ತ, ಬೆಸ್ಕಾಂ,
   ಕೋತಿತೋಪು ರಸ್ತೆ,
   ತುಮಕೂರು–572102.
4) ಮಾನ್ಯ ಅಧ್ಯಕ್ಷರು ರವರ ಆಪ್ತ ಕಾರ್ಯದರ್ಶಿ, ಕವಿನಿಆ.
5) ಮಾನ್ಯ ಸದಸ್ಯರು (ಎಂ)ರವರ ಆಪ್ತ ಕಾರ್ಯದರ್ಶಿ, ಕವಿನಿಆ.
6) ಮಾನ್ಯ ಸದಸ್ಯರು (ಆರ್)ರವರ ಆಪ್ತ ಕಾರ್ಯದರ್ಶಿ, ಕವಿನಿಆ
7) ಮಾನ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕವಿನಿಆ.
8) ರಾಜ್ಯದ ಎಲ್ಲಾ ಸಿಜಿಆರ್ಎಫ್‌ನ ಅಧ್ಯಕ್ಷರುಗಳಿಗೆ.